ಬಿ.ಆರ್. ಉಷಾ, ಬೆಂಗಳೂರು

ಕಾಗೆ ಕಾಕಾ; ನಾಯಿ ಬೌಬೌ; ಬೆಕ್ಕು ಮಿಯಾವ್. ಮನುಷ್ಯ?



ನಡೆಯುವ ಕಡೆ ಗುರ್ ಗುರ್; ನಡೆಯದ ಕಡೆ ಕುಂಯ್ ಕುಂಯ್

ಬಾ.ರಂ. ಸುರೇಶ್, ಶಿವಮೊಗ್ಗ

ನಾರಿ ಸ್ವರ್ಗಕ್ಕೆ ದಾರಿ ಎನ್ನುತ್ತಾರೆ. ಗಂಡಸು ಯಾವುದಕ್ಕೆ ದಾರಿ ಶಿವಾ?

ಅದೇ ನಾರಿ ಸೊರಗಕ್ಕೆ ದಾರಿ.

ವಿ. ಹಮೀದ್, ವಿಟ್ಲ

ಊರಿಗೆ ಬಂದಾಕೆ ನೀರಿಗೆ ಬರುತ್ತಾಳೆನ್ನುತ್ತಾರೆ. ಆದರೆ ಇಲ್ಲೊಬ್ಬಳು ಮೂರು ತಿಂಗಳಾದರೂ ಬಂದಿಲ್ಲವೇಕೆ?

ಮೂರು ತಿಂಗಳು ಆಗಿರುವುದರಿಂದ ಭಾರ ಎತ್ತಬೇಡಿ ಎಂದಿದ್ದಾರಂತೆ ಡಾಕ್ಟ್ರು.

ಪಿ. ಜಯವಂತ ಪೈ, ಕುಂದಾಪುರ

ರಾಮನಿಗೂ ಪರಶುರಾಮನಿಗೂ ವ್ಯತ್ಯಾಸವೇನು?



ಸಂಗೀತಭಾಷೆಯಲ್ಲಿ, ರಾಮನದು ಸ್ಥಾಯಿಭಾವ; ಪರಶುರಾಮನದು ಸಂಚಾರಿಭಾವ.

ಸುಮಾ ರಮೇಶ್, ಹಾಸನ

‘...ನೀಚ ಬುದ್ಧಿಯ ಬಿಡು ನಾಲಿಗೆ’ ಎಂಬ ಆರೋಪ ನಾಲಿಗೆಯ ಬದಲು ಮೆದುಳಿಗೆ ಸಲ್ಲಬೇಕಲ್ಲವೆ?

ಊಹೂಂ. ಅಧಿಕಾರಿಗೆ ಬಾಗುವುದು, ಅಟೆಂಡರ್‌ಗೆ ಬೈಯುವುದು ನಮ್ಮ ಸಂಪ್ರದಾಯ.

ಆರ್. ನಾಗರಾಜ್, ಗೊರೂರು

ಊರಿಗೆ ಬಂದವಳು ನೀರಿಗೆ ಬರ್ತಾಳೆ. ಬಾರಿಗೆ ಬಂದವನು?

ಮೋರಿಗೆ ಬರ್‍ತಾನೆ.

ಮಲ್ಲಿಕಾರ್ಜುನ, ಸುರಧೇನುಪುರ

ಹೆಣ ಪಂಚಭೂತಗಳಲ್ಲಿ ಲೀನವಾಗತ್ತೆ, ಹಣ?

ಲಂಚಭೂತಗಳಲ್ಲಿ.

ಎಂ.ಟಿ. ರಮಾನಂದರೆಡ್ಡಿ, ಮದಕರಿಪುರ

ಹೆಂಡತಿಯನ್ನು ಲೇ ಬಾರೆ, ಹೋಗೆ ಎಂದು ಕರೆಯಬಾರದಂತೆ. ಮತ್ತೇನೆಂದು ಕರೆಯಬೇಕು?

ಏಕೆ ಕರೆಯಬೇಕು? ಬೇಕಾದಾಗ ಆಕೆಯೇ ಬರುತ್ತಾಳೆ, ಅಲ್ಲಿಯವರೆಗೆ ಸಂತೋಷದಿಂದಿರಿ.

ಬೂಕನಕೆರೆ ವಿಜೇಂದ್ರ, ಮೈಸೂರು

ರಾಜಕಾರಣಿಗಳನ್ನು ಎಷ್ಟು ಬೈದರೂ ಸುಮ್ಮನೆ ಇರುತ್ತಾರಲ್ಲ?

ಮನಸ್ಸಿಗೆ ಕುಷ್ಠರೋಗ ಹಿಡಿದವರಿಗೆ ಬೈಗುಳ ಚುಚ್ಚುವುದಿಲ್ಲ.

ರತ್ನಾ ಕೊರವರ, ನವಲುಗುಂದ

ಕೃಷ್ಣನ ಪ್ರೇಯಸಿ ರಾಧೆಯ ಮೇಲೆ ಕೃಷ್ಣನ ಹೆಂಡತಿಯರಿಗೆ ಅಸೂಯೆ ಬರುತ್ತಿರಲಿಲ್ಲವೆ?

ರಾಧೆಯಿಂದಲೇ ‘ಆರ್ಟ್ ಆಫ್ ಲವಿಂಗ್’ ಕಲಿಯುತ್ತಿದ್ದುದರಿಂದ ಮತ್ಸರದ ಬದಲು ಸ್ನೇಹವಿತ್ತಂತೆ.

ಬಿದರಹಳ್ಳಿ ಚೆನ್ನವೀರಪ್ಪ, ಹಿರೇಹಡಗಲಿ

ನಾಯಿ ಸಾಕಿದರೆ ಮನೆ ಕಾಯುತ್ತೆ, ನಾಲಿಗೆ ಸಾಕಿದರೆ ಮನೆತನ ಕಾಯುತ್ತಂತೆ, ಹೌದಾ?

ತೊಂದರೆಯೆಂದರೆ ಡಾಗ್‌ಫುಡ್ ಸುಲಭವಾಗಿ ಲಭ್ಯ; ನಾಲಿಗೆಗೆ ಬೇಕಾದ ವಿವೇಚನೆಯ ಕೋಟಾ ವಿರಳ.

ಜಯಶ್ರೀ, ಬೆಂಗಳೂರು

ಎಲ್ಲರಿಗೂ ಪುರುಷೋತ್ತಮನಂತಹ ಪತಿ, ಸಾವಿತ್ರಿಯಂತಹ ಸತಿ ಇದ್ದರೆ ಜೀವನ ಹೇಗಿರುತ್ತದೆ?

ಚೆನ್ನಾಗಿರಲ್ಲ. ಊರಿನವರ ಬದಲು ಸತಿಯ ಮಾತು ಕೇಳುವ, ದೀರ್ಘಾಯುಷಿ ಸಂಗಾತಿಯಿರುವುದೇ ಚೆನ್ನ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಪಂಚೆ ಬಿದ್ದುಹೋದರೂ ಅರಿವಾಗದವರಿಗೆ ತಮ್ಮ ಸಂದೇಶವೇನು ಗುರುಗಳೆ?

ವೆಲ್‌ಕ್ರೋ ಪಂಚೆ ಧರಿಸಿರಿ.

## ವಾರದ ಪ್ರಶ್ನೆ

ಶಿವಕುಮಾರ್ ಎಸ್. ಊರುಕೆರೆ

ಭ್ರಷ್ಟಾಚಾರಮುಕ್ತ ದೇಶ; ಮುಕ್ತ ಭ್ರಷ್ಟಾಚಾರ ದೇಶ; ಸದ್ಯದಲ್ಲಿ ನಿಮ್ಮ ಆಯ್ಕೆ ಯಾವುದು?

ಸದ್ಯದಲ್ಲಿ ಆಯ್ಕೆ ಇಲ್ಲವಲ್ಲ! ಭ್ರಷ್ಟಾಚಾರ ನಮ್ಮವರ ದೋಷವಲ್ಲ, ಗುಣವಾಗಿದೆ.

ಆರ್. ಮಧುಸೂದನ್, ಹಾಸನ

ಪ್ರೀತಿಗೆ ಮೈಲಿಗೆ ಆಗುವುದು ಯಾವಾಗ?

ಸಂಶಯದ ಸೋಂಕು ತಗುಲಿದಾಗ.

ಡಿ.ಸಿ. ಮನೋಹರ್, ದೊಮ್ಮಸಂದ್ರ

ಮದ್ಯಪಾನ ಮಾಡಿ ವಾಹನ ಚಲಾಯಿಸಬಾರದು. ಮದ್ಯ ಸೇವಿಸಿ ಮತ ಚಲಾಯಿಸುವ ಹಕ್ಕನ್ನೇಕೆ ನಿಷೇಧಿಸಬಾರದು?

ಸ್ಪಷ್ಟ ಅರಿವು ಇರುವಾಗ ಯಾವ ಅಭ್ಯರ್ಥಿಗೂ ಮತ ನೀಡಲು ಮನಸ್ಸು ಬಾರದಂತಲ್ಲ!

ವಿ. ಹೇಮಂತಕುಮಾರ್, ಬೆಂಗಳೂರು

ಹುಲಿ ಸಿಂಹಗಳನ್ನು ಬಿಟ್ಟು ಮನುಷ್ಯರನ್ನು ಕತ್ತೆಗೆ ಹೋಲಿಸಿ ಬೈಯುತ್ತಾರೆ. ಏಕೆ ಸರ್?



ಕೆಲವರ ಹಾಡುಗಾರಿಕೆ ಹಾಗೇ ಇರುತ್ತದಲ್ಲ!

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

ಮಕ್ಕಳು ತಮ್ಮ ಸಂದೇಹಗಳನ್ನು ತಂದೆತಾಯಿಯರಲ್ಲಿ ಕೇಳುವ ಬದಲು ಗೂಗಲ್‌ನಲ್ಲಿ ಕೇಳುವ ಕಾಲ ಬಂದಿದೆಯಲ್ಲಾ?

ಸರಿಯೇ. ಗೂಗಲ್‌ಗೆ ಮಕ್ಕಳಿಗೆ ಕೊಡಲು ಸಮಯ ಇರುತ್ತದೆ.

ಎಸ್.ಸಿ. ರಮೇಶ್, ಮೈಸೂರು

ಪ್ರತಿ ಮನೆಯಲ್ಲೂ ಹಿರಿಯ ಜೀವ ಇರಬೇಕೆನ್ನುವವರೇ ಕಡಿಮೆಯಾಗುತ್ತಿರಲು ಕಾರಣವೇನು?

ವರ್ಕ್ ಫ್ರಂ ಹೋಮ್ ಸಂದರ್ಭದಲ್ಲಿ ಕೆಮ್ಮಿದರೆ ಕೆಲಸಕ್ಕೆ ಭಂಗವಾಗುವುದಂತೆ.

**ರಾಮ್**

ಪ್ರಶ್ನೆ ಕಳಿಸಲು: editorsu@sudha.co.in